ಭಾಗಗಳಲ್ಲಿ ನಮ್ಮ ಭಾಷೆಯ ಪ್ರಯೋಗದ ಬಗ್ಗೆ ಕುತೂಹಲ ತೋರಿಸಿದ ತೇಜಸ್ವಿ, 'ಎಲ್ಲಿ ಒಂಚೂರು ನಿಮ್ಮೂರಿನ ಭಾಷೆ ಮಾತಾಡಿ' ಅಂದಾಗ ರಘುನಾಥರು, 'ಸುನಕು ಸುಮಾರು ಬತ್ತಾ ಅವೆ ಎಮಕು ಒಳಕಟ್ಟಾಕು' ಎಂದು ಹೇಳಿದರು. ಇದೂ ಕನ್ನಡವೇ, ಆದರೆ ನಮಗೆ ಅರ್ಥವಾಗಬೇಕಾದರೆ, 'ತುಂತುರು ಮಳೆ ಬರ್ತಾ ಇದೆ. ಎಮ್ಮೆ ಕರೂನ ಒಳಗೆ ಕಟ್ಟು' ಎಂದು ಹೇಳಬೇಕು. ಆಗ ತೇಜಸ್ವಿ ರಘುನಾಥರಿಗೆ ಹೇಳಿದ್ದು, 'ಮಕ್ಕಳಿಗೆ ಕನ್ನಡ ಸರಿಯಾಗಿ ಕಲಿಸಿ, ಆಗ ಅವರೇ ತಮಗೇನು ಬೇಕೊ ಅದನ್ನ ಓದಿಕೊಳ್ತಾರೆ'.

ಅಮೆರಿಕದಲ್ಲಿರುವ ಕನ್ನಡಿಗರು ಒತ್ತಾಯಪೂರ್ವಕವಾಗಿ ತೇಜಸ್ವಿಯವರನ್ನ ಅಮೆರಿಕಕ್ಕೆ ಆಹ್ವಾನಿಸಿದರು. ಆಗ ತೇಜಸ್ವಿ ಹೇಳಿದ ಮಾತು, 'ನಾನು ನಮ್ಮದೇ ಆದ ಉತ್ತರ ಕರ್ನಾಟಕವನ್ನು ನೆಟ್ಟಗೆ ನೋಡಿಲ್ಲ. ಅಲ್ಲಿನ ಮಣ್ಣಿನ ಬಣ್ಣ ಏನು? ಅವರ ಆಹಾರ ವಿಚಾರಗಳೇನು? ಅಲ್ಲಿನ ಮಳೆಬೆಳೆಗಳೇನು? ಒಂದೂ ಗೊತ್ತಿಲ್ಲ. ಅಮೆರಿಕವನ್ನು ನಾನು ನೋಡದಿದ್ದರೇನು?' ಎಂದು ಆಹ್ವಾನವನ್ನು ನಯವಾಗಿ ಬೇಡವೆಂದರು.

ತಾವೇ 'ಪುಸ್ತಕ ಪ್ರಕಾಶ'ನದ ಧ್ರುವತಾರೆಯಾಗಿದ್ದರೂ ಶ್ರೀರಾಮ್ ಮತ್ತು ರಾಘವೇಂದ್ರ ಮೂವರೂ ಸೇರಿ ನಮ್ಮದು 'ಟೀಮ್ ವರ್ಕ್' ಎಂದು ಹೇಳುತ್ತಿದ್ದರು. ಚದುರಂಗರ ಅಧ್ಯಕ್ಷತೆಯಲ್ಲಿ ಮಂಡ್ಯದಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ ಹೊಸ ಪುಸ್ತಕಗಳು ಸಮ್ಮೇಳನಾಧ್ಯಕ್ಷರಿಂದ ಬಿಡುಗಡೆಯಾಗುವ ಸಂದರ್ಭದಲ್ಲಿ ನಮ್ಮ ಹೊಸ ಪುಸ್ತಕಗಳನ್ನು ಬಿಡುಗಡೆ ಮಾಡಿಸೋಣವೇ? ಎಂದು ರಾಘವೇಂದ್ರ ಅವರು ಕೇಳಿದಾಗ ತೇಜಸ್ವಿಯವರು ಹೇಳಿದ್ದು – ಅವೆಲ್ಲಾ ಬೇಡ, ನಮಗೆ ಓದುಗರು ಓದಿ ಮೆಚ್ಚಿದರೆ ಸಾಕು. ನಮಗೆ ಛಾಲೆಂಜ್ ಇರುವುದು ಓದುಗರನ್ನು ಗೆಲ್ಲುವುದರಲ್ಲಿ; ಪ್ರಶಸ್ತಿ ಗಳಿಸುವುದರಲ್ಲಿ ಅಲ್ಲ. ತೇಜಸ್ವಿ ತಾವು ಬರೆಯಬೇಕಾದ ಕತೆಯ ಪಾತ್ರಗಳಿಗೆ ಎಲ್ಲೂ ಹೋಗಬೇಕಿರಲಿಲ್ಲ. ಕಿವಿ, ಮಾರ, ಬಿರಿಯಾನಿ ಕರಿಯಪ್ಪ ಮುಂತಾದವರು ಅವರ ಮುಂದೆ ಪ್ರತ್ಯಕ್ಷರಾಗುತ್ತಿದ್ದರು. ಒಮ್ಮೆ ಮೂಡಿಗೆರೆಯಲ್ಲಿ ನನ್ನನ್ನು ಬಸ್ ಹತ್ತಿಸಲು ಕಾಯುತ್ತಿದ್ದಾಗ, ಒಬ್ಬ ವ್ಯಕ್ತಿ ಬಂದು, 'ಅಣ್ಣೋರೆ ದೀಪಾವಳಿ ಹಬ್ಬಕ್ಕೆ ನಿಮಗೆ ಎಷ್ಟು ಕೆ.ಜಿ. ಹಂದಿ ಮಾಂಸ ಬೇಕು?' ಎಂದು ಗಂಟು ಬಿದ್ದ. ಎಷ್ಟೊ ಒಂದಷ್ಟು ಕೊಡು ಎಂದು ಸಾಗಹಾಕಿದ ಮೇಲೆ ನನ್ನ ಪ್ರಶ್ನೆ, 'ಇವನ್ಯಾರು? ಬಿರಿಯಾನಿ ಕರಿಯಪ್ಪನೇ?' ಆಶ್ಚರ್ಯದಿಂದ ತೇಜಸ್ವಿ 'ನಿಮಗ್ಹೇಗೆ ಗೊತ್ತಾಯಿತು' ಎಂದು ಪ್ರಶ್ನಿಸಿದಾಗ ಆತ 'ಮಾಂಸ ಎಂದಾಗಲೇ ಗೊತ್ತಾಯಿತು' ಎಂದು ನಕ್ಕೆ.

ತೇಜಸ್ವಿಯವರ ಬರಹಗಳಲ್ಲಿ ಕಾಡು, ಮೇಡು, ಕಪ್ಪೆ, ಹಕ್ಕಿ, ಹಾವು, ಕ್ರಿಮಿ ಕೀಟಗಳ ಬಗೆಗಿನ ಬರಹಗಳನ್ನು ಓದಿ ಆಕರ್ಷಿತನಾದ ಒಬ್ಬ ಹುಡುಗ ತೇಜಸ್ವಿಯವರಿಗೆ ನಿಮ್ಮಲ್ಲಿಗೆ ಬಂದು ನಾನು ಕಾಡಿನಲ್ಲಿ ಇರುತ್ತೇನೆ ಎಂದು ದುಂಬಾಲು ಬಿದ್ದ. ನೋಡು, ಕಾಡಿನ ಏಕತಾನತೆ, ನೀರವ ಮೌನ, ಮಳೆ ಇವೆಲ್ಲಾ ನಿಮ್ಮಂತಹ ಪೇಟೆ ಹುಡುಗರಿಗೆ ಕಷ್ಟ ಎಂದು ಹೇಳಿದರೂ ಹುಡುಗ ಬಂದ. ತೇಜಸ್ವಿಯವರ ತೋಟದ ಒಂದು ಚಿಕ್ಕ ಮನೆಯಲ್ಲಿ ಉಳಿದುಕೊಂಡು ತೋಟ ತಿರುಗುತ್ತಿದ್ದ. ಕೆಲವು ದಿನಗಳಾದ ಮೇಲೆ ಹುಡುಗ ನಾಪತ್ತೆ! 'ಲಂಕೇಶ್ ಪತ್ರಿಕೆ'ಯಲ್ಲಿ ತೇಜಸ್ವಿಯವರ 'ಜುಗಾರಿ ಕ್ರಾಸ್' ಇತ್ಯಾದಿ ಬರಹಗಳು ಬರತೊಡಗಿದ ಮೇಲೆ ಅಭಿಮಾನಿಗಳ ಪತ್ರಗಳ ದಾಳಿ ಶುರುವಾಯ್ತು. ತೇಜಸ್ವಿಯವರಿಗೆ ಶ್ರೀರಾಮ್, 'ನೀವು ಅಭಿಮಾನಿಗಳಿಗೆ ನಿರಾಶೆ ಮಾಡಬಾರದು, ಒಂದು ಸಾಲಾದರೂ ಉತ್ತರ ಬರೆಯಿರಿ' ಎಂದು ಒತ್ತಾಯಿಸಿದಾಗ, ತೇಜಸ್ವಿ ಉತ್ತರ ಕೊಡಲಾರಂಭಿಸಿದರು. ಸ್ವಲ್ಪ ಸಮಯದ ನಂತರ ಶ್ರೀರಾಮ್‌ಗೆ ತೇಜಸ್ವಿ, 'ನಿಮ್ಮ ಸಲಹೆಯ ಪರಿಣಾಮ ನೋಡಿ' ಎಂದು ಒಂದು ಪತ್ರ ತೋರಿಸಿದರು. 'ಜುಗಾರಿ ಕ್ರಾಸ್' ಕಾದಂಬರಿಯಿಂದ ಪ್ರಭಾವಿತರಾದ ಒಬ್ಬ ಮಹಿಳೆ ಬರೆದದ್ದು, 'ನಾನೇ ನಿಮ್ಮ ಕಾದಂಬರಿಯ ಗೌರಿ' ಎಂದು!